## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## ಸ್ಪೆಷಲ್ (Electricity) ಕೇಸ್: 18/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗೌರಮ್ಮ | ಫ್ರಾಸಾ- 5 |
| ಗಂಡನ ಹೆಸರು | : | ಶಿವ | ಚಾಸಾ- 6 |
| ವಯಸ್ಸು | : | 50 ವರ್ಷ | |
| ವೃತ್ತಿ | : | ಕೂಲಿ ಕೆಲಸ | |
| ವಾಸ | : | ಕುಶಾಲನಗರ | |

**ಸಾಕ್ಷಿಯನ್ನು ದಿನಾಂಕ 12-03-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

<u>**ಮುಖ್ಯವಿಚಾರಣೆ:**  ಸರ್ಕಾರಿ ಅಭಿಯೋಜಕರಿಂದ</u>:

ಫ್ರಾಸಾ-4 ಸಹ ನನ್ನ ವಾರಗಿತ್ತಿ. ನಮ್ಮಿಬ್ಬರಿಗೂ ಸಹ ಎರಡು ಎಕರೆ ಒಲ ಇರುತ್ತದೆ ಅದನ್ನು ನಾವು ಬೇರೆಯವರಿಗೆ ಗುತ್ತಿಗೆಗೆ ಕೊಟ್ಟಿರುತ್ತೇವೆ, ಆರೋಪಿಗೂ ಸಹ ನಮ್ಮ ಜಮೀನಿನ ಪಕ್ಕದಲ್ಲಿ ಜಮೀನು ಇರುತ್ತದೆ. ಆನೆ ನಮ್ಮ ಜಮೀನಲ್ಲಿ ಸತ್ತು ಬಿದ್ದಿತ್ತು ಅದು ಎಷ್ಟು ವರ್ಷಗಳಾಗಿತ್ತು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಸಹ ಹೋಗಿದ್ದೆ. ಆದರೆ ಹೇಗೆ ಸತ್ತಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಆನೆ ಹೇಗೆ ಸತ್ತಿದೆ ಎಂಬ ಬಗ್ಗೆ ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೇಳಿದರು, ಅನುಮತಿ ನೀಡಲಾಯಿತು.)**

<u>**ಪಾಟೀಸವಾಲು-**  ಸರ್ಕಾರಿ ಅಭಿಯೋಜಕರಿಂದ**:**</u>

ಆರೋಪಿ ತನ್ನ ಜಮೀನ ಬೇಲಿಗೆ ಸೋಲಾರ್ ತಂತಿ ಮೂಲಕ ವಿದ್ಯುತ್ ಹರಿದಿದ್ದರಿಂದ ಆನೆ ಸತ್ತಿದೆ ಎಂಬ ವಿಚಾರ ನನಗೆ ಗೊತ್ತಾಗಿದೆ ಅದೇ ಪ್ರಕಾರ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-**12** ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿ

ನಮ್ಮ ಪಕ್ಕದ ಜಮೀನಿನವರಾಗಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಆರ್.ಎಲ್ ವಕೀಲರಿಂದ:**

ಏನೂ ಇಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ.ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.